ಸಲ ಮುತ್ತು ಕೊಡು ಅಂತ ಐದು ವರ್ಷ ನನ್ನ ಪ್ರಾಣ ತಿಂತಿದ್ದಲ್ಲಾ... ಈಗ ಹುಡುಗಾಟ ಅಂತೀಯಾ' ಎಂದು ಜೋರಾಗಿ ನಕ್ಕಳು. ಟೆರೇಸ್ ತೋರಿಸಿ 'ಇಲ್ಲಿ ಗಾರ್ಡನ್ ಮಾಡ್ತೀನಿ' ಅಂದು ಅಲ್ಲೊಂದು ಮುತ್ತು ಕೊಟ್ಟಳು. ಮಹಡಿ ಇಳಿಯುವಾಗ ಮೆಟ್ಟಿಲುಮೆಟ್ಟಿಲಿಗೊಮ್ಮೆ ಅವನ ತೋಳನ್ನು ಚುಂಬಿಸಿದ್ದಳು. ಕೃಷ್ಣೇಗೌಡರಿಗೆ ಎಲ್ಲ ಒಂದು ಕನಸಿನಂತಿತ್ತು.

ಕೊನೆಯ ಮೆಟ್ಟಿಲಿನಲ್ಲಿ ಇಬ್ಬರೂ ಬಹಳ ಹೊತ್ತು ಕುಳಿತು ಮಾತಾಡಿದ್ದರು. 'ಬಾ ಇಲ್ಲಿ ಒಂದು ಕೆಲಸ ಇದೆ' ಎಂದು ಅವರನ್ನು ಎಬ್ಬಿಸಿ ಮನೆಯ ಹೊರಗೆ ಗೇಟಿನ ಹತ್ತಿರಕ್ಕೆ ಕರೆದೊಯ್ದಳು. ಒಳಗಿನಿಂದ ಒಂದು ಬಕೆಟ್ ನೀರು, ಒಂದು ಮಗ್ ತಂದಳು. ಕಾಂಪೌಂಡಿನ ಒಳಗೆ ನೆಲದಲ್ಲಿ ಎಡಕ್ಕೊಂದು, ಬಲಕ್ಕೊಂದು ಗುಣಿ ತೋಡಲಾಗಿತ್ತು. ಹಾಗೆಯೇ ಗೇಟಿನ ಆಚೆ ರಸ್ತೆಯ ಪಕ್ಕದಲ್ಲಿ ಎರಡು ಗುಣಿಗಳು ಸಿದ್ಧವಾಗಿದ್ದವು. ಒಳಭಾಗದಲ್ಲಿ ಗೋಡೆಗೆ ಒರಗಿಸಿದ್ದ ನಾಲ್ಕು ಸಸಿಗಳನ್ನು ಹಿಡಿದು ಅವುಗಳ ಪ್ಲಾಸ್ಟಿಕ್ ಕವರ್‌ಗಳನ್ನು ಹರಿದು ಒಂದೊಂದೇ ಸಸಿಯನ್ನು ಅವರ ಕೈಗೆ ಕೊಟ್ಟು ಗುಣಿಗಳಲ್ಲಿ ನೆಡಲು ಹೇಳಿದಳು. ಒಂದೊಂದು ಸಸಿಯನ್ನು ಹೂಣಿದಾಗಲೂ ಮಗ್ ನೀರನ್ನು ಅವರ ಕೈಗಿತ್ತಳು. ನಾಲ್ಕೂ ಸಸಿಗಳು ಕೃಷ್ಣೇಗೌಡರ ಕೈಯಲ್ಲಿ ನೀರುಂಡವು. ಮಣ್ಣಾಗಿದ್ದ ಅವರ ಕೈ ತೊಳೆದುಕೊಳ್ಳಲು ನೀರು ಹಾಕಿದ ಗೌರಿ ಒರೆಸಿಕೊಳ್ಳಲು ತನ್ನ ಸೀರೆಯ ಸೆರಗನ್ನು ನೀಡಿದಳು. 'ಕರ್ಚೀಫ್ ಇದೆ' ಎಂದು ತೆಗೆಯಲು ಹೋದ ಅವರ ಕೈಯನ್ನು ತಡೆದು ಎರಡೂ ಕೈಗಳನ್ನೂ ಅವಳೇ ಒರೆಸುತ್ತಾ ಮನೆಯೊಳಕ್ಕೆ ಕರೆದೊಯ್ದಳು. ಒಂದು ಚಿಕ್ಕ ಬ್ಯಾಗಲ್ಲಿದ್ದ ಡಬ್ಬಿಯನ್ನು ತೆಗೆದು, 'ನೋಡು, ನಿನಗೆ ಹಾಲಬಾಯಿ ಇಷ್ಟವಾದಾಗಲೆಲ್ಲ ತರುತ್ತಿದ್ದುದ್ದು ಇದೇ ಡಬ್ಬೀಲಿ, ನಿಂಗೆ ಜ್ಞಾಪಕ ಇದೆಯಾ! ನಿನ್ನ ಮೆಸೇಜ್ ಬಂದ ಮೇಲೆ ನನ್ನ ಕೈಯಾರ ಮಾಡಿರೋ ಹಾಲಬಾಯಿ' ಎಂದು ಒಂದನ್ನು ಅವನ ಬಾಯಿಗಿಟ್ಟಳು. ಇವರೂ ಹಾಗೇ ಮಾಡಿ ಗೌರಿಯನ್ನು ಒಮ್ಮೆ ಬಿಗಿಯಾಗಿ ಅಪ್ಪಿಕೊಂಡರು. ಅವರಿಬ್ಬರ ಹೊಳೆಯುವ ಕಣ್ಣುಗಳಲ್ಲಿ ನೀರು ಮತ್ತು ಮುಖದಲ್ಲಿ ನೋವುಂಡ ನಗುವಿತ್ತು. ಅಂದು ಬೀಳ್ಕೊಳ್ಳುವಾಗ 'ಗೌರಿ ನಿನ್ನನ್ನ ಎಲ್ಲಾದ್ರೂ ಡ್ರಾಪ್ ಮಾಡಲಾ' ಅಂದಾಗ 'ನನ್ನ ಕೈನಿ ಕಾಯ್ತಾ ಇದೆ' ಎಂದು ಕೈನೆಟಿಕ್ ಹೋಂಡಾ ಕಡೆ ಕೈಮಾಡಿ ತೋರಿಸಿದ್ದಳು. ಕೃಷ್ಣಗೌಡರ ಕಾರು ಕಣ್ಮರೆಯಾಗುವವರೆಗೆ ಗೌರಿ ಗೇಟಿನಲ್ಲೇ ನಿಂತಿದ್ದಳು.



ಈ ಕನಸಿನಂಥ ಘಟನೆಯಾದ ಮೇಲೆ ವರ್ಷಕ್ಕೆ ಒಂದು ಅಥವಾ ಎರಡು ಬಾರಿ ಈ ರಸ್ತೆಯಲ್ಲಿ ಗೌಡರು ಕಾರು ಓಡಿಸಿಕೊಂಡು ಹೋಗುವುದು ರೂಢಿಯಾಗಿತ್ತು. ಆದರೆ ಎಂದೂ ಮನೆಯ ಮುಂದೆ ಕಾರನ್ನು ನಿಲ್ಲಿಸಿರಲಿಲ್ಲ. ನಾಲ್ಕೈದು ವರ್ಷಗಳಲ್ಲೇ ಆಕಾಶ ಮಲ್ಲಿಗೆಯ ಗಿಡಗಳು ಮರಗಳಾಗುತ್ತಿದ್ದವು. ಸುಮ್ಮನೆ ಏನೂ ಕಾರಣವಿಲ್ಲದೆ ಒಂದು ನಿಶ್ಚಿತ ವೇಗದಲ್ಲಿ ಕಾರು ಓಡಿಸುತ್ತ ಈ ರಸ್ತೆ ಹಾಯುತ್ತಿದ್ದ ಅವರು ಆ ಮರಗಳನ್ನು, ಹೂವುಗಳನ್ನು ಕಣ್ಣು ತುಂಬಿಕೊಳ್ಳುವಷ್ಟರಲ್ಲಿ ಕಾರು ಮುಂದೆ ಹೋಗಿರುತ್ತಿತ್ತು. ಹೀಗೆ ಮೊನ್ನೆ ವಿನಾ ಕಾರಣ ಹಾಯುತ್ತಿದ್ದಾಗಲೇ ಅಚಾನಕ್ಕಾಗಿ ಅವರ ಕಣ್ಣಿಗೆ 'ಲೀಸ್/ಸೇಲ್' ಬೋರ್ಡ್ ಕಣ್ಣಿಗೆ ಬಿದ್ದದ್ದು.

* * *

ಕೃಷ್ಣೇಗೌಡರು ಹಾಲಿನಲ್ಲಿ ಮಹಡಿಗಿದ್ದ ಮೊದಲ ಮೆಟ್ಟಿಲಲ್ಲಿ ಬಹಳ ಹೊತ್ತು ಕುಳಿತಿದ್ದು, ನೆನಪಿನಿಂದ ಹೊರಬಂದು ಮೇಲೆದ್ದರು. ಬಾಗಿಲು ಮುಚ್ಚಿ ಬೀಗ ಹಾಕಿದರು. ಗೇಟ್ ಬೀಗ ಹಾಕುವಾಗ ಅವರಿಗೆ ಕಾಂಪೌಂಡಿನ ಒಳಗೆ ಎರಡು, ಹೊರಗೆ ರಸ್ತೆಬದಿಯಲ್ಲಿ ಎರಡು ಒಟ್ಟು ನಾಲ್ಕು ಆಕಾಶ ಮಲ್ಲಿಗೆ ಸಸಿ ನೆಟ್ಟಿದ್ದರ ನೆನಪಾಯಿತು. ಈಗ ಮೂರೇ ಮರಗಳಿದ್ದವು. ಮತ್ತೊಮ್ಮೆ ಒಂದಷ್ಟು ಹೂವುಗಳನ್ನು ಆರಿಸಿಕೊಂಡು ಹೋಗಿ ಕಾರಿನ ಬೀಗ ತೆಗೆದರು. ಹೂವುಗಳನ್ನು ಡ್ಯಾಶ್ ಬೋರ್ಡಿನಲ್ಲಿಟ್ಟು ಕಾರನ್ನು ಚಾಲೂ ಮಾಡಿದರು. ಹೂವುಗಳ ಪರಿಮಳ ಕಾರನ್ನು ತುಂಬಿಕೊಳ್ಳುತ್ತಿತ್ತು. ●